# ಸುವರ್ಣ ಸಂಭ್ರಮ

### ಹಿಂದಿನಂತೆಯೇ ಈಗಲೂ ಇಷ್ಟ

ಹಿಂದಿನವರು 'ಸುಧಾ' ಪತ್ರಿಕೆಯನ್ನು ಬೇರೆ ಬೇರೆ ಕಾರಣಕ್ಕೆ ನೆನಪಿಸಿಕೊಳ್ಳುತ್ತಿರಬಹುದು. ಆದರೆ ಇತ್ತೀಚಿನ ವರ್ಷಗಳಲ್ಲಿ ಓದಲು ಆರಂಭಿಸಿದ ನಮಗೆ ಕಥೆ, ಧಾರಾವಾಹಿ, ಸಂಪಾದಕೀಯ, ಜಾಣರ ಪೆಟ್ಟಿಗೆ, ಎಳೆಯರ ಅಂಗಳ ತುಂಬಾ ಇಷ್ಟವಾಗಿವೆ.

-ಕೆ.ಯಂ.ವೀರೇಶ್, ಕೂಡ್ಲಿಗಿ

### ಅಲಮೇಲಮ್ಮ ನಮ್ಮ ಮನೆಯವಳು!

'ಸುಧಾ' 50 ವರ್ಷದ ಸುವರ್ಣ ಸಂಭ್ರಮದಲ್ಲಿ 17 ವಾರಗಳ ಕಾಲ ಧಾರಾವಾಹಿಯಾಗಿ ಪ್ರಕಟವಾದ 'ರಾಜ ಒಡೆಯರ್' ಕೂಡಾ ಒಂದು ಮೈಲುಗಲ್ಲು.

ಅಲಮೇಲಮ್ಮಳ ಶಾಪದ ಪ್ರಸಂಗವನ್ನು ಲೇಖಕಿ ವೇದಾ ನಿಭಾಯಿಸಿದ ರೀತಿ ಮೆಚ್ಚುಗೆಯಾಯಿತು. ಅಲಮೇಲಮ್ಮ ಎಂಬುವಳು ಇದ್ದಳೋ..? ಇಲ್ಲವೋ..? ಅದು ಬೇರೆ ಪ್ರಶ್ನೆ. ಆದರೆ ಅಂತಹ ಯಾರಾದರೊಬ್ಬರ ಶಾಪದಿಂದ ಅನೇಕ ಕುಟುಂಬಗಳಿಗೆ ದುರ್ಗತಿ ಬಂದೊದಗಿದೆ! ನಮ್ಮ ಮನೆಯಲ್ಲೂ ಅಂತಹದೇ ಘಟನೆ ನಡೆದಿದೆ. ಹಾಗಾಗಿ ಶ್ರೀರಂಗಪಟ್ಟಣದ ರಾಣಿ ಅಲಮೇಲಮ್ಮ ನಮ್ಮವಳೇ, ನಮ್ಮ ಮನೆಯವಳೇ ಅನಿಸಿತು.

-ಎಸ್.ಪುಷ್ಪ, ಮೈಸೂರು

### 'ಸುಧಾ'ದಿಂದ ನಾನೂ ಲೇಖಕನಾದೆ

ಸುಮಾರು 1989ರಿಂದ ನಾನು 'ಸುಧಾ'ದ ನಿಯಮಿತ ಓದುಗ ಮತ್ತು ಸಂಗ್ರಾಹಕ. 'ಸುಧಾ' ಬೆಳೆದಂತೆ ನಾನೂ ಬೆಳೆದೆ. ನನ್ನ ಮೊದಲ ಅನಿಸಿಕೆ ಪ್ರಕಟವಾದದ್ದು 'ಸುಧಾ'ದಲ್ಲೇ. ನಾನೀಗ ಪತ್ರಕರ್ತನಾಗಿರುವ ಶ್ರೇಯಸ್ಸೂ 'ಸುಧಾ'ಗೆ ಸಲ್ಲಬೇಕು. ನನ್ನ ಬಳಿ 1989ರಿಂದ 'ಸುಧಾ' ಸಂಗ್ರಹವಿದೆ. ಅದರಲ್ಲಿ ಪ್ರಕಟವಾಗುತ್ತಿದ್ದ ಫೋಟೊ ಕಾಮಿಕ್ಸ್‌ಗಳನ್ನು ಬುಕ್ ಬೈಂಡ್ ಮಾಡಿಸಿರುವೆ.

-ಕೆ.ಪಿ.ಅಶ್ವಿನ್ ರಾವ್, ಪದವಿನಂಗಡಿ




### ಸಕಾಲಿಕ ಲೇಖನ

'ಸುಧಾ' ಫೆ.20 ಮುಖಪುಟ ಲೇಖನ ಡಾ.ಕೆ.ಎಸ್.ಪವಿತ್ರರ 'ಪ್ರೇಮಕ್ಕೆ ಕಣ್ಣಿದೆ' ಸಕಾಲಿಕವಾಗಿದೆ. ಎಲ್ಲ ಪ್ರೇಮಿಗಳು ಹಾಗೆಯೇ ತಂದೆ ತಾಯಿಯರು ಓದಬಹುದಾದ ಲೇಖನ.

-ರಾಜಶೇಖರ ಗೌಡ, ಕೊಟ್ಟೂರು/ ಸು.ವಿಜಯಲಕ್ಷ್ಮಿ, ಮಹಾವೀರ ಕಾಸರ, ಶಿವಮೊಗ್ಗ/ ಎಂ.ಜಿ.ರಾಮಚಂದ್ರ, ಮಂಡಗಳಲೆ/ ಹೇಮಲತಾ ಸುಬ್ರಹ್ಮಣ್ಯ/ ಬಿ.ಎಸ್.ರಮೇಶ್, ಬೆಂಗಳೂರು/ ಆರ್.ಮಣಿ ಹಾಡ್ಯ, ಮೈಸೂರು/ ಮೇ.ಗೋ.ಸುಬ್ಬಣ್ಣ, ಮೇಗರವಳ್ಳಿ/ ರವೀಂದ್ರನಾಥ ಶಿ.ಯಡಹಳ್ಳಿ, ಬೀಳಗಿ/ ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

### ಪೇಲವ ಬರಹ

'ಪ್ರೇಮಕ್ಕೆ ಕಣ್ಣಿದೆ' ಲೇಖನದ ಕೊನೆಯಲ್ಲಿ ಪೇಲವವಾಗಿದೆ. ತೋಚಿದ್ದನ್ನು ಗೀಚಿದ ಹಾಗಿದೆ.

-ಸಹನಾ ಕೂಡಲಿ, ಶಿವಮೊಗ್ಗ

### ಕಪ್ಪು ಗುಲಾಬಿ, ಸೇವಂತಿ

'ಕಪ್ಪು ಗುಲಾಬಿ' ಚಿತ್ರ ನೋಡಿ, ವಿನಯ್‌ಕುಮಾರ್ ಬರಹ ಓದಿದ ಮೇಲೆ ಅದನ್ನು ನೋಡುವ ಆಸೆಯಾಗಿದೆ. ಪ್ರೇಮಾಭಟ್ ಅವರ 'ಸೇವಂತಿ' ಧಾರಾವಾಹಿ ಓದಲು ಕುತೂಹಲದಿಂದ ಕಾಯುತ್ತಿದ್ದೇವೆ.

-ಬಿ.ಎಸ್.ರಮೇಶ್, ಬೆಂಗಳೂರು

### ಸ್ವಾರಸ್ಯಪೂರ್ಣ ವಿಚಾರ ಲಹರಿ

ವೈನತೇಯರ 'ವಿಷಾದ ಯೋಗ' ಸ್ವಾರಸ್ಯಪೂರ್ಣ ವಿಚಾರ ಲಹರಿ.

-ವೈ.ಜಿ.ನರಸಿಂಹನ್, ಶಿವಮೊಗ್ಗ



## 'ಸುಧಾ'ಕ್ಕೆ ಚಾಣಕ್ಯ ಪ್ರಶಸ್ತಿ

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಬಳಗದ 'ಸುಧಾ' ವಾರಪತ್ರಿಕೆಗೆ 2014ರ ಸಾಲಿನ ಪ್ರತಿಷ್ಠಿತ 'ಚಾಣಕ್ಯ ಪ್ರಶಸ್ತಿ' ಲಭಿಸಿದೆ. ಪಬ್ಲಿಕ್ ರಿಲೇಶನ್ಸ್ ಕೌನ್ಸಿಲ್ ಆಫ್ ಇಂಡಿಯಾ (ಪಿಆರ್‌ಸಿಐ) ರಾಷ್ಟ್ರಮಟ್ಟದಲ್ಲಿ ಈ ಪ್ರಶಸ್ತಿಗೆ ಆಯ್ಕೆ ನಡೆಸುತ್ತದೆ. ಪತ್ರಿಕಾ ವೃತ್ತಿ, ಉದ್ಯಮ ಮತ್ತು ಸಮಾಜಕ್ಕೆ ನೀಡಿದ ವಿಶೇಷ ಕೊಡುಗೆಯನ್ನು ಗುರುತಿಸಿ 'ಸುಧಾ' ವಾರಪತ್ರಿಕೆಯನ್ನು 2014ರ ಸಾಲಿಗೆ 'ವರ್ಷದ ಅತ್ಯುತ್ತಮ ಮ್ಯಾಗಸಿನ್' ಎಂದು ಗುರುತಿಸಲಾಗಿದೆ.

ಇತ್ತೀಚೆಗೆ ಮುಂಬೈಯಲ್ಲಿ ನಡೆದ ಗ್ಲೋಬಲ್ ಕಮ್ಯುನಿಕೇಶನ್ ಸಮಾವೇಶದಲ್ಲಿ ಬಿರ್ಲಾ ಉದ್ಯಮ ಗುಂಪಿನ ನಿರ್ದೇಶಕಿ ರಾಜಶ್ರೀ ಬಿರ್ಲಾ ಅವರು ಪ್ರಶಸ್ತಿ ಪ್ರದಾನ ಮಾಡಿದರು. ದಿ ಪ್ರಿಂಟರ್ಸ್ ಮೈಸೂರು (ಪ್ರೈ) ಲಿಮಿಟೆಡ್ ಸಂಸ್ಥೆಯ ಪರವಾಗಿ 'ಸುಧಾ' ಸಹಾಯಕ ಸಂಪಾದಕ ಬಿ.ಎಂ.ಹನೀಫ್ ಪ್ರಶಸ್ತಿ ಸ್ವೀಕರಿಸಿದರು. ಪಿಆರ್‌ಸಿಐ ಯ ಸ್ಥಾಪಕ ಅಧ್ಯಕ್ಷ ಎಂ.ಬಿ. ಜಯರಾಮ್, ರಾಷ್ಟ್ರೀಯ ಅಧ್ಯಕ್ಷ ಆರ್.ಟಿ. ಕುಮಾರ್ ಮತ್ತು ಉದ್ಯಮಿ ವಿಠಲ ಕಾಮತ್ ಹಾಜರಿದ್ದರು.

### ಶಿಲ್ಪ ಪ್ರಜ್ಞೆ ದ್ಯೋತಕ

ಟಿ.ಎಸ್.ಗೋಪಾಲರ 'ಶಿಲ್ಪ ಪ್ರಜ್ಞೆ' ಚಿತ್ರಬರಹ ಭಾರತೀಯರ ಶಿಲ್ಪಪ್ರಜ್ಞೆಗೆ ದ್ಯೋತಕವಾಗಿದೆ.

-ಶೋಭಾ ಅರವಿಂದ್, ಶಿವಮೊಗ್ಗ

### ಧೂಲೇಕರ್, ವದ್ದ ಒಂದೇ ಎನಿಸಿತು

ನಾ.ಕಾರಂತ ಪೆರಾಜೆ ಅವರ 'ಕಾಲದ ಮರು ಓದು' ಓದಿದಾಗ ಇತ್ತೀಚೆಗೆ ನಿಧನರಾದ ಸಕಲೇಶಪುರ ಗ್ರಂಥಾಲಯದ ಗ್ರಂಥಪಾಲಕ ಚಂದ್ರಶೇಖರ ಧೂಲೇಕರರ ನೆನಪಾಯಿತು. ವದ್ದ ವೆಂಕಟರಮಣ ಭಟ್ ಅವರು ಧೂಲೇಕರರ ಸಹೋದರ ಇರಬೇಕು ಎಂದುಕೊಂಡೆ.

-ರಾಜಶೇಖರ ಹಾದಿಮನಿ, ಧಾರವಾಡ

### ಸಕಾಲಿಕ ಗೆಲುವು

'ರಣಜಿ: ಹೊಸ ಮನ್ವಂತರ' ಕೆ.ಓಂಕಾರ ಮೂರ್ತಿ ಅವರ ಲೇಖನ ಸಕಾಲಿಕವಾಗಿತ್ತು, ಸೂಕ್ತವಾಗಿತ್ತು.

-ಎಚ್.ಆನಂದಕುಮಾರ್, ಚಿತ್ರದುರ್ಗ/ ಆರ್.ರಮಾಮಣಿ, ರಾಯಚೂರು/ ಮರ್ವಿನ್ ಪಾವ್ಲ ಗೊನ್ಸಾಲ್ವಿಸ್, ಹೊನ್ನಾವರ

### ಗೋಲಿ ಹೊಡೆದ ಕಥೆ

ಶ್ರೀನಿವಾಸ ಜೋಕಟ್ಟೆಯವರು 'ಗೋಲಿ' ಕಥೆಯಲ್ಲಿ ಚೆನ್ನಾಗಿ ಆಟವಾಡಿದ್ದಾರೆ. ಯಥಾಪ್ರಕಾರ 'ಸುಖೀಭವ'ದಲ್ಲಿ ವಿನೋದ ಛಬ್ಬಿಯವರ ಲೈಂಗಿಕ ಸಲಹೆಗಳು ಅತ್ಯುತ್ತಮವಾಗಿವೆ.

-ಎನ್.ಪ್ರದೀಪ್, ಚೆಲುವರಸನಕೊಪ್ಪಲು

### ಪೊಳ್ಳಾದ ಕಥೆ

ಶ್ರೀನಿವಾಸ ಜೋಕಟ್ಟೆ ಅವರ ಕಥೆ 'ಗೋಲಿ' ಕಥಾ ಹಂದರ ಪೊಳ್ಳಾಗಿತ್ತು, ಅಪೂರ್ಣವೆನಿಸಿತು.

- ವಿಜಯ, ಬೆಂಗಳೂರು